I/318459/2022

ಕರ್ನಾಟಕ ಸರ್ಕಾರ

ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ,
ಆಯುಕ್ತರ ಕಛೇರಿ, ನಂ.16-ಡಿ, ಡಿ.ದೇವರಾಜ ಅರಸು ಭವನ, 3ನೇ ಮಹಡಿ, ಮಿಲ್ಲರ್ಸ್ ಟ್ಯಾಂಕ್ ಬೆಡ್ ಏರಿಯಾ, ವಸಂತ ನಗರ, ಬೆಂಗಳೂರು-560 052,

**ಸಂ:BCWD-16019/15/2022-TRAINING(C.No.889191)      ದಿನಾಂಕ: 21.09.2022.**

**ಡಿ.ದೇವರಾಜ ಅರಸು ಪ್ರತಿಭಾ ಪುರಸ್ಕಾರ (ಎಸ್.ಎಸ್.ಎಲ್.ಸಿ ಮತ್ತು ದ್ವಿತೀಯ ಪಿ.ಯು.ಸಿ)**
**ಅರ್ಜಿ ಸಲ್ಲಿಸಲಿಚ್ಚಿಸುವ ವಿದ್ಯಾರ್ಥಿಗಳಿಗೆ ಸೂಚನೆಗಳು (Instructions to the Students)**

(ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಅಲ್ಪಸಂಖ್ಯಾತ ವಿದ್ಯಾರ್ಥಿಗಳು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಿಂದ ಈ ಸೌಲಭ್ಯವನ್ನು ಪಡೆಯಲು ನಿಯಮಗಳಲ್ಲಿ ಅವಕಾಶವಿರುವುದಿಲ್ಲ)

**ವಿದ್ಯಾರ್ಥಿಗಳಿಗೆ ನಿಗದಿಪಡಿಸಿರುವ ಅರ್ಹತೆಗಳು:**

1. ಭಾರತದ ಪ್ರಜೆಯಾಗಿದ್ದು, ಕರ್ನಾಟಕದ ಖಾಯಂ ನಿವಾಸಿಯಾಗಿರಬೇಕು
2. ಕರ್ನಾಟಕ ಸರ್ಕಾರ ಅಧಿಸೂಚಿಸಿರುವ ಹಿಂದುಳಿದ ವರ್ಗಗಳ ಪಟ್ಟಿಗೆ (ಪ್ರವರ್ಗ-1, 2ಎ, 3ಎ ಅಥವಾ 3ಬಿ) ಸೇರಿರಬೇಕು.
3. ಸರ್ಕಾರಿ/ಮಾನ್ಯತೆ ಪಡೆದ ಅನುದಾನಿತ/ಅನುದಾನ ರಹಿತ ಶಾಲಾ/ ಕಾಲೇಜುಗಳಲ್ಲಿ ವ್ಯಾಸಂಗ ಮಾಡಿರಬೇಕು.
4. 2022 ರಲ್ಲಿ ನಡೆದ ಎಸ್.ಎಸ್.ಎಲ್.ಸಿ ಮತ್ತು ದ್ವಿತೀಯ ಪಿ.ಯು.ಸಿ ಯ ವಾರ್ಷಿಕ ಪರೀಕ್ಷೆಯಲ್ಲಿ ಶೇಕಡ 90 ಮತ್ತು ಅದಕ್ಕಿಂತ ಹೆಚ್ಚು ಅಂಕಗಳನ್ನು ಗಳಿಸಿರಬೇಕು.
5. ಸಮಾನ ಕೋರ್ಸ್‌ಗಳಿಗೆ ಸಂಬಂಧಿಸಿದಂತೆ ಒಬ್ಬ ವಿದ್ಯಾರ್ಥಿಗೆ ಒಂದು ಬಾರಿ ಮಾತ್ರ ಈ ಸೌಲಭ್ಯವನ್ನು ಒದಗಿಸಲಾಗುವುದು.
6. ವಿದ್ಯಾರ್ಥಿಯ ಕುಟುಂಬದ ಒಟ್ಟು ವಾರ್ಷಿಕ ಆದಾಯ ಮಿತಿ –

| ಕ್ರ.ಸಂ. | ಪ್ರವರ್ಗ | ಆದಾಯ ಮಿತಿ (ರೂ.ಗಳಲ್ಲಿ) |
|---|---|---|
| 1 | 1 | 2.50 ಲಕ್ಷಗಳು |
| 2 | 2ಎ, 3ಎ ಮತ್ತು 3ಬಿ | 1.00 ಲಕ್ಷ |

7. ಪ್ರತಿಭಾ ಪುರಸ್ಕಾರದ ಮೊತ್ತ –

| ಕ್ರ. ಸಂ. | ತರಗತಿ | ಪ್ರತಿಭಾ ಪುರಸ್ಕಾರ ನೀಡುವ ಗರಿಷ್ಠ ವಿದ್ಯಾರ್ಥಿಗಳ ಸಂಖ್ಯೆ | ಪ್ರತಿಭಾ ಪುರಸ್ಕಾರದ ಮೊತ್ತ (ರೂ.ಗಳಲ್ಲಿ) |
|---|---|---|---|
| 1 | ಎಸ್.ಎಸ್.ಎಲ್.ಸಿ. | 1000 | 10,000/- |
| 2 | ದ್ವಿತೀಯ ಪಿ.ಯು.ಸಿ. | 500 | 15,000/- |

8. ಮೀಸಲಾತಿಯ ವಿವರ.

| ಕ್ರ. ಸಂ. | ಪ್ರವರ್ಗ | ಶೇಕಡವಾರು |
|---|---|---|
| 1 | 1 | 24% |
| 2 | 2ಎ | 46% |
| 3 | 3ಎ | 14% |
| | | |

| | | |
|---|---|---|
| 4 | 3ಬಿ | 16% |
| | **ಒಟ್ಟು** | **100%** |

9. ವಿದ್ಯಾರ್ಥಿನಿಯರಿಗೆ ಶೇ.33 ಹಾಗೂ ವಿಶೇಷ ಚೇತನ ವಿದ್ಯಾರ್ಥಿಗಳಿಗೆ ಶೇ.5(ಶೇ.50 ರಷ್ಟು ವಿದ್ಯಾರ್ಥಿನಿಯರಿಗೆ ಮತ್ತು ಶೇ.50 ರಷ್ಟು ಸಾಮಾನ್ಯ) ರಷ್ಟು ಮೀಸಲಾತಿಯನ್ವಯ ಡಿ. ದೇವರಾಜ ಅರಸು ಪ್ರತಿಭಾ ಪುರಸ್ಕಾರವನ್ನು ನೀಡಲಾಗುವುದು.
10. ಸರ್ಕಾರಿ ಶಾಲೆ ಮತ್ತು ಅನುದಾನಿತ/ಅನುದಾನ ರಹಿತ ಕನ್ನಡ ಮಾಧ್ಯಮ ಶಾಲೆಗಳಲ್ಲಿ ಅಧ್ಯಯನ ಮಾಡಿರುವ ವಿದ್ಯಾರ್ಥಿಗಳಿಗೆ ಶೇ.50 ರಷ್ಟು ಮೀಸಲಾತಿಯನ್ನು ನೀಡಲಾಗುವುದು.
11. ಅರ್ಜಿ ಸಲ್ಲಿಕೆ ಹಾಗೂ ಮಂಜೂರಾತಿ ವಿಧಾನ –

- ಹಿಂದುಳಿದ ವರ್ಗಗಳ ಅರ್ಹ ವಿದ್ಯಾರ್ಥಿಗಳು ತಮ್ಮ ಅರ್ಜಿಗಳನ್ನು ಆನ್‌ಲೈನ್ ಮೂಲಕವೇ ಸಲ್ಲಿಸಬೇಕು.
- ವಿದ್ಯಾರ್ಥಿಯ ಭಾವಚಿತ್ರವನ್ನು JPEG/JPG format ನಲ್ಲಿ 30 KB ಒಳಗೆ ಇರುವಂತೆ ಸಿದ್ಧಪಡಿಸಿಕೊಂಡು ಅರ್ಜಿಯೊಂದಿಗೆ ಅಪ್‌ಲೋಡ್ ಮಾಡಬೇಕು.
- ವಿದ್ಯಾರ್ಥಿಯು ತನ್ನ ಆಧಾರ್ ಸಂಖ್ಯೆಯೊಂದಿಗೆ ಲಿಂಕ್ ಆಗಿರುವ ತನ್ನ ಬ್ಯಾಂಕ್ ಖಾತೆ ವಿವರವನ್ನು ಆನ್-ಲೈನ್ ನಲ್ಲಿ ಸಲ್ಲಿಸಬೇಕು ಹಾಗೂ ಆಧಾರ್ ಪ್ರತಿ ಹಾಗೂ ಇದಕ್ಕೆ ಲಿಂಕ್ ಆಗಿರುವ ಬ್ಯಾಂಕ್ ಖಾತೆ ವಿವರ ಇರುವ ಪಾಸ್ ಪುಸ್ತಕದ ಮೊದಲ ಪುಟವನ್ನು (ಬ್ಯಾಂಕ್ ಖಾತೆ ಸಂಖ್ಯೆ, ಬ್ಯಾಂಕ್ ಶಾಖೆ ಮತ್ತು IFSC ಕೋಡ್ ಮಾಹಿತಿ) JPEG/JPG format ನಲ್ಲಿ 100 ರಿಂದ 150 KB ಒಳಗೆ ಇರುವಂತೆ ಸಿದ್ಧಪಡಿಸಿಕೊಂಡು ಅರ್ಜಿಯೊಂದಿಗೆ ಅಪ್‌ಲೋಡ್ ಮಾಡಬೇಕು.
- ವಿಶೇಷ ಚೇತನ ವಿದ್ಯಾರ್ಥಿಗಳಿದ್ದಲ್ಲಿ ಅದರ ಬಗ್ಗೆ ಪ್ರಮಾಣ ಪತ್ರವನ್ನು JPEG/JPG format ನಲ್ಲಿ 100 ರಿಂದ 150 KB ಒಳಗೆ ಇರುವಂತೆ ಸಿದ್ಧಪಡಿಸಿಕೊಂಡು ಅರ್ಜಿಯೊಂದಿಗೆ ಅಪ್‌ಲೋಡ್ ಮಾಡಬೇಕು.
- ಸರಿಯಾದ/ಪೂರ್ಣ ಮಾಹಿತಿ ಮತ್ತು ದಾಖಲೆಗಳನ್ನು ಸಲ್ಲಿಸದ ವಿದ್ಯಾರ್ಥಿಗಳನ್ನು ಸದರಿ ಪ್ರತಿಭಾ ಪುರಸ್ಕಾರಕ್ಕೆ ಪರಿಗಣಿಸಲಾಗುವುದಿಲ್ಲ.
- ವಿದ್ಯಾರ್ಥಿಗಳು ಗಳಿಸಿದ ಅಂಕಗಳು ಹಾಗೂ ಮೀಸಲಾತಿಯನ್ವಯ ನಿಗದಿಪಡಿಸಿದ ಭೌತಿಕ ಗುರಿಗನುಗುಣವಾಗಿ ಡಿ. ದೇವರಾಜ ಅರಸು ಪ್ರತಿಭಾ ಪುರಸ್ಕಾರವನ್ನು ಮಂಜೂರು ಮಾಡಲಾಗುವುದು.
- **ಆನ್-ಲೈನ್ ಮೂಲಕ ಅರ್ಜಿಯನ್ನು ಸಲ್ಲಿಸಲು ಕೊನೆಯ ದಿನಾಂಕ:21.10.2022ರ ಸಂಜೆ 5.00 ಗಂಟೆ ಆಗಿರುತ್ತದೆ.**
- ಹೆಚ್ಚಿನ ವಿವರಗಳಿಗಾಗಿ ಇಲಾಖಾ ವೆಬ್‌ಸೈಟ್ https://bcwd.karnataka.gov.in ಅನ್ನು ನೋಡುವುದು.
- ಸಹಾಯವಾಣಿ: 8050770004 (ಸಮಯ ಬೆಳಗ್ಗೆ10.00 ರಿಂದ ಸಂಜೆ 5.30 ರ ವರೆಗೆ, ಸಾರ್ವಜನಿಕ ರಜಾ ದಿನಗಳನ್ನು ಹೊರತುಪಡಿಸಿ).

ಆಯುಕ್ತರು
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ,
ಬೆಂಗಳೂರು.